Reg. No. | | | | | | | | |

**BBMKAL 103**

## Credit Based I Semester B.B.M. Degree Examination, Nov./Dec. 2015
## (New Scheme) (2013-14 Batch Onwards)
## KANNADA
### ಕನ್ನಡ ಭಾಷಾ ಪತ್ರಿಕೆ – 1

Time : 3 Hours Max. Marks : 80

**ಭಾಗ – ೧**

**(ಕಾವ್ಯ)**

I. ಅ) ಒಂದಕ್ಕೆ ಉತ್ತರಿಸಿರಿ : **(1×8=8)**

1) 'ಜೋಳವಾಟಿ' ಮತ್ತು 'ವೇಳಾವಾಟಿ' ಎಂಬ ಪ್ರಧಾನ ಮೌಲ್ಯಗಳು ಸ್ವಾಮಿನಿಷ್ಠೆ ಮೆರೆವ ಯೋಧರ ಮನೋಭಿಲಾಷೆಗಳಲ್ಲಿ ವ್ಯಕ್ತಗೊಂಡ ಬಗೆಯನ್ನು ವಿವರಿಸಿರಿ.

2) ಹರಿಶ್ಚಂದ್ರನ ಸತ್ಯನಿಷ್ಠೆಯ ಕುರಿತು ವಸಿಷ್ಠ–ವಿಶ್ವಾಮಿತ್ರರು ಪರಸ್ಪರ ವಾಗ್ವಾದಗೈಯ್ಯುವ ಸನ್ನಿವೇಶವನ್ನು ವಿವರಿಸಿರಿ.

ಆ) ಒಂದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಸಂಸಾರದ ನಿಸ್ಸಾರತೆ ಮತ್ತು ಭೋಗ ಜೀವನದ ನಶ್ವರತೆಯನ್ನು ಪುರಂದರದಾಸರ ಕೀರ್ತನೆಗಳಲ್ಲಿ ಅಭಿವ್ಯಕ್ತವಾದ ಬಗೆಯನ್ನು ವಿಶದಪಡಿಸಿರಿ.

2) 'ಅರ್ಥಪೂರ್ಣವಾದ ಬದುಕನ್ನು ಬದುಕುವಲ್ಲಿ ಎದುರಾಗುವ ಸಮಸ್ಯೆಗಳನ್ನು ಜಾಣ್ಮೆಯಿಂದ ಪರಿಹರಿಸಿಕೊಳ್ಳಬೇಕಾದುದು ಅನಿವಾರ್ಯ'– ಈ ನೀತಿಯನ್ನು ಎಸ್.ವಿ.ಪಿ. ತಮ್ಮ ಕವನದಲ್ಲಿ ವಿವರಿಸಿದ ರೀತಿಯನ್ನು ತಿಳಿಸಿ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. **(2×3=6)**

1) ಸುಬ್ಬು ಹೊಲೆಯಾರ್

2) ಪಂಪ

3) ಗೋಪಾಲಕೃಷ್ಣ ಅಡಿಗ.

II. ಅ) ಒಂದು ಪದ್ಯದ ಭಾವಾರ್ಥವನ್ನು ಸಂದರ್ಭದೊಂದಿಗೆ ಸ್ವಾರಸ್ಯವಾಗಿ ಬರೆಯಿರಿ. **(1×5=5)**

1) ಮರಣಕ್ಕೆ ಸಮನಾದ ಭಯವಿಲ್ಲ ಬಡತನ
ಕೆಣೆಯಾದ ಪರಿಭವವಿಲ್ಲ
ಹಸಿವಿಗೆ ಸಮನಾದ ನೋವಿಲ್ಲ ಅಜ್ಞಾನ
ಕೆಣೆಯಾದ ಭೇದವಿನ್ನಿಲ್ಲ.

2) ಕುರುಕ್ಷೇತ್ರ ಚಾಚುತ್ತಲಿದೆ ದೇಶದುದ್ದಕ್ಕು; ಪಾತ್ರಗಳೇನೋ
ಅವೇ; ಪಾತ್ರಧಾರಿಗಳು ಬೇರೆ, ಬೇರೆ,
ದುರ್ಯೋಧನನಿಗೆ ಯುಧಿಷ್ಠಿರ ವೇಷ ಶಕುನಿಯೇ
ಶ್ರೀಕೃಷ್ಣ ಪಾರ್ಥನ ವೇಷ ಉತ್ತರನಿಗೆ.

ಆ) **ಎರಡು** ಸಾಲುಗಳಿಗೆ ಸಂದರ್ಭ ಬರೆದು ಸ್ವಾರಸ್ಯವನ್ನು ವಿಶದಪಡಿಸಿರಿ : **(2×3=6)**

1) ಕಣ್ಣು ಕೀಳುವ ಸೂಜಿ, ಕೊಲುವ ಬಡಿಗೆ
2) ಕೊಟ್ಟು ತಾನುಣಬೇಕು ನರನು
3) ಸರಕ್ಕನೆಳೆದು ಕೊಂಡಿದ್ದ ಕೆಂಡ ತುಳಿದವನಂತೆ

III. **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(5×1=5)**

1) ಪುರಂದರದಾಸರ ಅಂಕಿತನಾಮವೇನು ?
2) ಷಟ್ಪದಿ ಕಾವ್ಯ ಪರಂಪರೆಯ ಪ್ರವರ್ತಕನೆಂದು ಯಾರನ್ನು ಗುರುತಿಸುತ್ತೇವೆ ?
3) ಪಂಪನನ್ನು ಮುಕ್ತ ಕಂಠದಿಂದ 'ಪಸರಿಪ ಕನ್ನಡ-ಕ್ಕೊಡೆಯನೋರ್ವನೆ ಸತ್ಕವ ಪಂಪ ನಾವಗಂ' ಎಂದು ಹೊಗಳಿದ ಕವಿ ಯಾರು ?
4) 'ನಾವೆಲ್ಲರು ಒಂದೇ ಜಾತಿ, ಒಂದೇ ಮತ, ಒಂದೇ ಕುಲ, ನಾವು ಮನುಜರು' ಎಂದು ಹಾಡಿದ ಕವಿ ಯಾರು ?
5) 'ಅನಾಮಿಕ ಆಂಗ್ಲರು' ಈ ಕೃತಿಯ ಕವಿ ಯಾರು ?

**ಭಾಗ - ೨**

**ಗದ್ಯ**

IV. ಅ) **ಒಂದಕ್ಕೆ** ಉತ್ತರಿಸಿರಿ. **(1×8=8)**

1) ದೇವರೇ ಬರಲಿಲ್ಲ ಕತೆಯಲ್ಲಿ ವಿಮಲ ಮತ್ತು ನಳಿನಾ ದೇವರ ಕುರಿತಾದ ಕಲ್ಪನೆಗಳನ್ನು ಅಭಿವ್ಯಕ್ತಿಸಿದ ಬಗೆಯನ್ನು ಚಿತ್ರಿಸಿ.
2) ಮಾನವೀಯ ಸಂಬಂಧ ಬಹಳ ಮುಖ್ಯ ಎಂಬುದನ್ನು ಪ್ರಭುಸಮ್ಮಿತ ಕತೆಯಲ್ಲಿ ವ್ಯಕ್ತಪಡಿಸಿದ ರೀತಿಯನ್ನು ವಿವರಿಸಿ.

ಆ) **ಒಂದಕ್ಕೆ** ಉತ್ತರಿಸಿರಿ : **(1×8=8)**

1) 'ಹುಲಿ ಸವಾರಿ' ಕತೆಯ ಆಶಯವನ್ನು ವಿವರಿಸಿರಿ.
2) ವಿ.ಸೀ ಯವರು ಸಾಹಿತ್ಯ ಪರರೇ ಹೊರತು, ಶಾಸ್ತ್ರಪರರಲ್ಲ, ಈ ಹೇಳಿಕೆಯನ್ನು ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿ.

ಇ) **ಒಂದಕ್ಕೆ** ಉತ್ತರಿಸಿರಿ : **(1×5=5)**

1) ಪುಟ್ಟ ಗುಬ್ಬಿ ಕೇಳಿದ ದೊಡ್ಡ ಪ್ರಶ್ನೆ'ಪ್ರಬಂಧದ ಸ್ವಾರಸ್ಯವನ್ನು ವಿವರಿಸಿರಿ.
2) ಆರ್ಥಿಕ ನಷ್ಟದಿಂದ ಮನಸ್ಸು ಮುದುಡುವುದು, ಆದರೆ ಆತ್ಮಗೌರವಕ್ಕೆ ಹೊಡೆತ ನೀಡುವ ಅಂಶ ತೀವ್ರವಾಗಿ ಕಾಡುವುದು ಇದನ್ನು ಸ್ವಲ್ಪ ಹಣ ಮತ್ತು ಒಬ್ಬ ಮನುಷ್ಯ ಲೇಖನದಲ್ಲಿ ಎಚ್.ಎಸ್.ವಿ. ವಿವರಿಸಿದ ಬಗೆಯನ್ನು ಚರ್ಚಿಸಿ.

V. ಯಾವುದಾದರೂ ಒಂದಕ್ಕೆ ಟಿಪ್ಪಣಿ ಬರೆಯಿರಿ : (1×5=5)

1) ಶಬ್ದ ಮಾಲಿನ್ಯ ಆರೋಗ್ಯಕ್ಕೆ ಮಾರಕ.

2) ಕಷ್ಟದಲ್ಲಿರುವಾಗ ಯಾರೋ ಒಬ್ಬರು ಆಡಿದ ಸಾಂತ್ವನದ ಮಾತು ಅಮೃತ ಸತ್ವವಾಗಬಲ್ಲುದು.

3) ಲೋಕ ಕಲ್ಯಾಣಕ್ಕೆ ಸೌಮನಸ್ಯವೇ ಮೂಲ ಧಾತು.

VI. ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (4×1=4)

1) 'ಸಕ್ಕರೆ ಗೊಂಬೆ' ನಾಟಕದ ಕರ್ತೃ ಯಾರು ?

2) 'ಸೀತಾಪುರದ ಕತೆಗಳು' ಇದು ಯಾರು ಬರೆದ ಕೃತಿ ?

3) ಪೀಟರ್ ಯಾವ ದೇಶದವನು ?

4) ಎಚ್.ಎಸ್.ವಿ. ಯವರ ಊರು ಯಾವುದು ?

## ಭಾಗ – ೩

## ಕ್ರಿಯಾತ್ಮಕ ಕನ್ನಡ

VII. ಒಂದಕ್ಕೆ ಉತ್ತರಿಸಿರಿ : (1×8=8)

1) ಜಾಹೀರಾತು ಎಂದರೇನು ? ಸ್ವರೂಪ ಮತ್ತು ಉದ್ದೇಶವನ್ನು ವಿವರಿಸಿರಿ.

2) 'ವೃತ್ತಪತ್ರಿಕೆಗಳು ಜನಜೀವನದ ನಾಡಿ', 'ಜಾಹೀರಾತು ವೃತ್ತಪತ್ರಿಕೆಗಳ ನಾಡಿ' – ಈ ಹೇಳಿಕೆಯನ್ನು ವಿವರಿಸಿರಿ.

VIII. ಒಂದಕ್ಕೆ ಉತ್ತರಿಸಿರಿ : (1×5=5)

1) ಆಹ್ವಾನ ಪತ್ರಿಕೆ ಎಂದರೇನು ? ಪತ್ರಿಕೆಯ ಮಾದರಿಯೊಂದನ್ನು ರಚಿಸಿ.

2) ಓದುಗರ ಪತ್ರಗಳು/ವಾಚಕರ ವಾಣಿ ಎಂದರೇನು ? ಮಾದರಿ ಪತ್ರದ ಸಹಿತ ವಿವರಿಸಿರಿ.

IX. ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ಪತ್ರಿಕೆಗಳ ಮೂಲ ಆದಾಯ ಎಲ್ಲಿಂದ ?

2) ಮ್ಯಾಗಿ ನೂಡಲ್ಸ್‌ನ ಘೋಷವಾಕ್ಯ ಯಾವುದು ?

---